# ಸೋಲಾರ್ ಉಪಕರಣಗಳ ದೇಣಿಗೆ

**ಮುಂಡಗೋಡ:** ಸೆಲ್ಕೋ ಸೋಲಾರ್ ಸಂಸ್ಥೆಯವರು ಆರೋಗ್ಯ ಇಲಾಖೆಗೆ ನೀಡುತ್ತಿರುವ ಸೌರ ವಿದ್ಯುತ್ ಹಾಗೂ ವೈದ್ಯಕಿಯ ಉಪಕರಣಗಳಿಂದ ಸಹಸ್ರಾರು ರೋಗಿಗಳಿಗೆ ಅನುಕೂಲವಾಗಲಿದೆ ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಶರತ್ ನಾಯ್ಕ ಹೇಳಿದರು.

ತಾಲೂಕಿನ ಕಾತೂರ ಗ್ರಾಮದಲ್ಲಿ ಸರಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರದ ಸಭಾ ಭವನದಲ್ಲಿ ಸೆಲ್ಕೋ ಸೋಲಾರ್ ಕಂಪನಿಯವರಿಂದ ಆರು ಕಿಲೋ.ವ್ಯಾಟ್ ಸೌರ ವಿದ್ಯುತ್‌ನ ಎಲ್ಲ ಉಪಕರಣಗಳು ಹಾಗೂ ಆಸ್ಪತ್ರೆಯ ವೈದ್ಯರಿಗೆ ಅವಶ್ಯವಿರುವ ವೈದ್ಯಕೀಯ ಉಪಕರಣಗಳ ವಿತರಣಾ ಸಮಾರಂಭದಲ್ಲಿ ಅವರು ಮಾತನಾಡಿದರು.

ತಾಲೂಕಿನ ಹುನಗುಂದ, ಮಳಗಿ, ಹಾಗೂ ಕಾತೂರ ಈ ಮೂರು ಆಸ್ಪತ್ರೆಗಳಿಗೆ ಸೆಲ್ಕೋ ಸೋಲಾರ್ ಸಂಸ್ಥೆಯವರು ಇಪ್ಪತ್ತೊಂದು ಲಕ್ಷ ರೂ. ಮೌಲ್ಯದ ಉಪಕರಣಗಳನ್ನು ದೇಣಿಗೆ ನೀಡುವ ಮೂಲಕ ಮಾನವೀಯತೆ ತೋರಿದ್ದಾರೆ. ಆಸ್ಪತ್ರೆಯ ಸಿಬ್ಬಂದಿಗಳು ಸಹ ಈ ಉಪಕರಣಗಳನ್ನು ಸಮರ್ಥವಾಗಿ ಬಳಕೆ ಮಾಡಿಕೊಂಡು ಜನಸೇವೆ ಮಾಡುವುದು ಅವಶ್ಯವಿದೆ ಎಂದರು.

ಸೆಲ್ಕೋ ಸೋಲಾರ್‌ನ ಡಿಜಿಎಂ ಪ್ರಸನ್ನ ಹೆಗಡೆ ಮಾತನಾಡಿ, ಬಡ ಜನರಿಗೆ ಅನುಕೂಲವಾಗಲೆಂದು ನಮ್ಮ ಸಂಸ್ಥೆಯಿಂದ ಕಾತೂರ, ಮಳಗಿ, ಹುನಗುಂದ ಹೀಗೆ ಮೂರು ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಸೋಲಾರ್ ಸೌರ ವಿದ್ಯುತ್ ಹಾಗೂ ವೈದ್ಯಕೀಯ ಉಪಕರಣಗಳನ್ನು ನೀಡುತ್ತಿದ್ದು ನಮ್ಮ ಸಂಸ್ಥೆ ಕೇವಲ ಸೋಲಾರ್ ಅಳವಡಿಸಿ ಹೋಗುವುದಿಲ್ಲ, ಅದರ ನಿರ್ವಹಣೆಯನ್ನು ಸಹ ಮಾಡುತ್ತೇವೆ, ಇದರಿಂದ ಎಲ್ಲ ಜನರಿಗೂ ಸುದುಪಯೋಗವಾಗಲಿ ಎಂದರು. ಸೆಲ್ಕೋ ಸೋಲಾರ ಸಂಸ್ಥೆಯ ಸುಬ್ರಾಯ ಹೆಗಡೆ ಅವರು ಉಪಕರಣಗಳ ಬಗ್ಗೆ ಮಾಹಿತಿ ನೀಡಿದರು.



ಸೆಲ್ಕೋ ಸೋಲಾರ್ ಸಂಸ್ಥೆಯವರು ಆಸ್ಪತ್ರೆಗಳಿಗೆ ಇಪ್ಪತ್ತೊಂದು ಲಕ್ಷ ರೂ. ಮೌಲ್ಯದ ಉಪಕರಣಗಳನ್ನು ವಿತರಿಸಿದ ಸಮಾರಂಭ.

ಈ ವೇಳೆ ಸೆಲ್ಕೋ ಸೋಲಾರ್‌ನ ಹಿರಿಯ ಅಧಿಕಾರಿಗಳಾದ ಸುದೀಪತೋ ಘೋಷ್, ಪಾರ್ಥ ಸಾರಥಿ, ಥಾಮಸ್ ಪೋಲೆಂಕಾಂ, ತಾಲೂಕು ಆಡಳಿತ ವೈದ್ಯಾಧಿಕಾರಿ ಡಾ. ಎಚ್.ಎಫ್.ಇಂಗಳೆ ಹಾಗೂ ಆಸ್ಪತ್ರೆಯ ಸಿಬ್ಬಂದಿಗಳು ಉಪಸ್ಥಿತರಿದ್ದರು.

Scanned with CamScanner